**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಗಳ ನ್ಯಾಯಾಲಯ, ಹೊಸಪೇಟೆ.**

**ಸಿಸಿ ನಂಬರ್** 153/2017

**ಸಿ ಡಬ್ಲ್ಯೂ** - 4

**ಪಿ ಡಬ್ಲ್ಯೂ** - 2

| | |
|---|---|
| **ಸಾಕ್ಷಿಯ ಹೆಸರು -** | **ವೆಂಕಟೇಶ** |
| **ತಂದೆಯ ಹೆಸರು -** | **ತೇಜಾ ನಾಯಕ** |
| **ವಯಸ್ಸು -** | 42 **ವರ್ಷಗಳು** |
| **ಉದ್ಯೋಗ -** | **ವಕೀಲರು,** |
| **ವಾಸಸ್ಥಳ -** | **ಹೊಸಪೇಟೆ** |

**ಸಾಕ್ಷಿಯನ್ನು ದಿನಾಂಕಃ** 20-02-2025 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ಚಾಸಾ **-1** ನನ್ನ ಹೆಂಡತಿ. ಚಾಸಾ **-5** ನನ್ನ ಸ್ನೇಹಿತ. ಆರೋಪಿ ಪರಿಚಯ ಇರುತ್ತದೆ.

ನನ್ನ ಹೆಂಡತಿ ದಿಃ **19-03-2016** ರಂದು ಹಲ್ಲು ನೋವು ಕಾಣಿಸಿಕೊಂಡಿದ್ದರಿಂದ ಬಸ್ ನಿಲ್ದಾಣದ ಪಕ್ಕದಲ್ಲಿರುವ ಸೋನಿ ಕ್ಲಿನಿಕ್ ಗೆ ಚಿಕಿತ್ಸೆ ಪಡೆಯಲು ಹೋಗಿದ್ದಳು. ದಿಃ **19-03-2016** ರಿಂದ **06-05-2016** ರವರೆಗೆ ಚಾಸಾ **-1** ರವರು ಆರೋಪಿಯ ಕ್ಲಿನಿಕ್ ನಲ್ಲಿ ಚಿಕಿತ್ಸೆ ಪಡೆದಿರುತ್ತಾರೆ. ಆರೋಪಿ **4-5** ಸಿಟ್ಟಿಂಗ್ ನಲ್ಲಿ ರೂಟ್ ಕೆನಾಲ್ ಚಿಕಿತ್ಸೆ ಮುಗಿಸಿ ಕೊಡುತ್ತೇನೆ ಎಂದು ಹೇಳಿದ್ದರು. **5** ನೇ ಸಿಟ್ಟಿಂಗ್ ಬರುವಷ್ಟರಲ್ಲಿ ಚಾಸಾ **-1** ರವರ ಹಲ್ಲು ನೋವು ಹೆಚ್ಚಾಗಿತ್ತು. ನೋವು ಹೆಚ್ಚಾಗಿದ್ದರಿಂದ ಆರೋಪಿ ಎಕ್ಸ-ರೇ ತೆಗೆದು ನೋಡಿರುತ್ತಾರೆ. ಚಾಸಾ **-1** ರವರ ಹಲ್ಲಿನಲ್ಲಿ ಇಂಜಕ್ಷನ್ ಮುರಿದು ತುಂಡು ಸಿಲುಕಿಕೊಂಡಿದೆ ಎಂದು ಆರೋಪಿ ತಿಳಿಸಿದ್ದರು.

ಸದರಿ ಇಂಜಕ್ಷನ್ ತುಂಡನ್ನು ತಮ್ಮ ಹಿರಿಯ ವೈದ್ಯರನ್ನು ಕೊಪ್ಪಳದಿಂದ ಹೊಸಪೇಟೆಗೆ ಕರೆಯಿಸಿ ಚಿಕಿತ್ಸೆ ಕೊಡಿಸುತ್ತೇನೆ ಎಂದು ಆರೋಪಿ **2-3** ತಿಂಗಳುಗಳ ಕಾಲ ಹೇಳುತ್ತಾ ಹೋದರು. ಆರೋಪಿ ದಿನಗಳನ್ನು ತಳ್ಳುತ್ತಾ ಹೋಗಿದ್ದರಿಂದ ದಿಃ **10-05-2016** ರಂದು ಚಾಸಾ **-1** ರವರು ಧಾರವಾಡದ ಎಸ್ ಡಿ ಎಂ ದಂತ ಆಸ್ಪತ್ರೆಗೆ ಹೋಗಿ ತೋರಿಸಿರುತ್ತಾರೆ. ಸದರಿ ಆಸ್ಪತ್ರೆಯ ದಂತ ವೈದ್ಯರಾದ ರಾಘವೇಂದ್ರುರವರು ಎಕ್ಸ ರೇ ತೆಗೆದು ನೋಡಿ ಹಲ್ಲಿನಲ್ಲಿ ಉಪಕರಣದ ತುಂಡೊಂದು ಇದೆ ಎಂದು ಖಾತ್ರಿ ಪಡಿಸಿಕೊಂಡು ಚಿಕಿತ್ಸೆ ನೀಡಿರುತ್ತಾರೆ. ಸದರಿ ವೈದ್ಯರು ಇನ್ನೊಂದು ಹಲ್ಲಿಗೆ ಆರೋಪಿ ಆಳವಾಗಿ ಡ್ರಿಲ್ ಮಾಡಿರುತ್ತಾರೆ ಎಂದು ತಿಳಿಸಿ ಚಿಕಿತ್ಸೆಯನ್ನು ನೀಡಿರುತ್ತಾರೆ. ಚಾಸಾ **-1** ರವರ ವಯಸ್ಸು ಚಿಕ್ಕದಿರುವುದರಿಂದ ಸದರಿ ಉಪಕರಣದ ತುಂಡನ್ನು ತೆಗೆಯಲು ಆಗುವುದಿಲ್ಲ, ಹಲ್ಲಿನಲ್ಲಿ ಪಸ್ ತುಂಬಿಕೊಂಡರೆ ತೆಗೆಯಬಹುದು ಎಂದು ತಿಳಿಸಿ ಚಿಕಿತ್ಸೆ ನೀಡಿ ಹಲ್ಲಿಗೆ ಕ್ಯಾಪ್ ಹಾಕಿರುತ್ತಾರೆ. ಸದರಿ ಚಿಕಿತ್ಸೆ ತಾತ್ಕಾಲಿಕವಾಗಿದ್ದು, ನೋವು ಕಾಣಿಸಿಕೊಂಡಾ ಹಲ್ಲನ್ನು ತೆಗೆಯಬೇಕಾಗುತ್ತದೆ ಎಂದು ತಿಳಿಸಿರುತ್ತಾರೆ.

ಧಾರವಾಡದ ಆಸ್ಪತ್ರೆಯಲ್ಲಿ ದಿಃ **10-05-2016** ರಿಂದ **01-07-2016** ರವರೆಗೆ ಚಾಸಾ **-1** ರವರು **4** ಸಿಟ್ಟಿಂಗ್ ಗಳಲ್ಲಿ ಚಿಕಿತ್ಸೆ ಪಡೆದಿರುತ್ತಾರೆ. ದಿಃ **10-05-2016** ರಂದು ಧಾರವಾಡದ ಆಸ್ಪತ್ರೆಯವರು ನೀಡಿದ್ದ ವರದಿಯನ್ನು ಆರೋಪಿಗೆ ತೋರಿಸಿ ಉಪಕರಣ ಹಲ್ಲಿನಲ್ಲಿ ತುಂಡಾಗಿರುವುದು ನಿಜವಿದ್ದು, ಅದರ ಚಿಕಿತ್ಸಾ ವೆಚ್ಚವನ್ನು ಭರಿಸುವಂತೆ ಕೇಳಿದಾಗ ಆರೋಪಿ ಯಾವುದೇ ರೀತಿಯಲ್ಲಿ ಸಹಕರಿಸಲಿಲ್ಲ.

**ಸಿ ಡಬ್ಲ್ಯೂ - 4**
**ಪಿ ಡಬ್ಲ್ಯೂ - 2**

ಧಾರವಾಡದ ಆಸ್ಪತ್ರೆಯವರು ರೂಟ್ ಕೆನಾಲ್ ಚಿಕಿತ್ಸೆ ನೀಡಲು ವೈದ್ಯರು ಎಂಡೋಡೆಂಟಿಸ್ಟ (ಎಂ.ಡಿ.) ಆಗಿರಬೇಕು, ಬಿ ಡಿ ಎಸ್ ವೈದ್ಯರು ಸದರಿ ಚಿಕಿತ್ಸೆ ನೀಡಲು ಬರುವುದಿಲ್ಲ ಎಂದು ನಮಗೆ ತಿಳಿಸಿದ್ದರು. ಆರೋಪಿ ಚಿಕಿತ್ಸಾ ವೆಚ್ಚವನ್ನು ಭರಿಸದಿದ್ದ ಕಾರಣ ನನ್ನ ಹೆಂಡತಿ ಆತನ ವಿರುದ್ಧ ಗ್ರಾಹಕರ ವೇದಿಕೆಗೆ ಅರ್ಜಿ ಸಲ್ಲಿಸಿದ್ದರು. ಸದರಿ ಅರ್ಜಿ ಪುರಸ್ಕೃತಗೊಂಡು ಪರಿಹಾರದ ಆದೇಶ ಆಗಿರುತ್ತದೆ. ಚಾಸಾ -1 ರವರು ಚಿಕಿತ್ಸೆಯನ್ನು ಬೇರೆ ಕಡೆ ಪಡೆಯುತ್ತೇವೆ ವೆಚ್ಚ ಭರಿಸಿ ಎಂದು ಲಿಖಿತವಾಗಿ ಆರೋಪಿಗೆ ಕೇಳಿಕೊಂಡರೂ ಸಹ ಆತ ವೆಚ್ಚವನ್ನು ಭರಿಸಿರುವುದಿಲ್ಲ.

ದಿಃ **23-10-2016** ರಂದು ಪಟ್ಟಣ ಪೋಲಿಸ ಠಾಣೆಯ ಎ ಎಸ್ ಐ ರವರು ನನ್ನನ್ನು ಕರೆಯಿಸಿ ಘಟನೆಗೆ ಸಂಬಂಧಿಸಿ ಹೇಳಿಕೆಯನ್ನು ಪಡೆದಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ ಪಿ ವಾಯ್., ವಕೀಲರಿಂದ**

ನಾನು ಎ ಎಸ್ ಐ ರವರ ಮುಂದೆ ನೀಡಿದ ಹೇಳಿಕೆಯಂತೆಯೇ ನ್ಯಾಯಾಲಯದ ಮುಂದೆ ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿ. ಹೇಳಿಕೆಯಲ್ಲಿ ನಾನು ಈ ದಿನ ಹೇಳಿದ ಎಲ್ಲಾ ವಿಚಾರಗಳನ್ನು ಬರೆದುಕೊಂಡಿಲ್ಲ. ನಾನು ನನ್ನ ಹೇಳಿಕೆಯನ್ನು ಸುಧಾರಿಸಿ ನ್ಯಾಯಾಲಯದ ಮುಂದೆ ಹೆಚ್ಚುವರಿ ಅಂಶಗಳನ್ನು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿ 4-5 ಸಿಟ್ಟಿಂಗ್ ಗಳಲ್ಲಿ ಚಿಕಿತ್ಸೆಯನ್ನು ಮುಗಿಸುವುದಾಗಿ ಹೇಳಿ, ಊಟದಲ್ಲಿ ಮೃದುವಾದ ಆಹಾರಗಳನ್ನು ಸೇವಿಸುವಂತೆ ಹೇಳಿದ್ದರು. ಆರೋಪಿ ರೂ. 5,000/- ರಿಂದ 10,000/- ಶುಲ್ಕವನ್ನು ಪಡೆಯುವುದಾಗಿ ತಿಳಿಸಿದ್ದರು.

ಆರೋಪಿ ರೂ. 5,000/- ನಿಗದಿತ ಶುಲ್ಕ ಮತ್ತು ಹಲ್ಲಿಗೆ ಕ್ಯಾಪ್ ಹಾಕಲು ಹೆಚ್ಚಿನ ಹಣ ಆಗುತ್ತದೆ ಎಂದು ತಿಳಿಸಿದ್ದರು. ಆಸ್ಪತ್ರೆಯಲ್ಲಿ ಯಾವ ದಿನಾಂಕಗಳಂದು ಚಿಕಿತ್ಸೆಗಾಗಿ ಬರಬೇಕು ಎಂದು ಪುಸ್ತಕ ಅಥವಾ ರಸೀದಿಗಳನ್ನು ನೀಡಿರುವುದಿಲ್ಲ. ಸಾಕ್ಷಿ ಮುಂದುವರೆದು ಔಷಧಿ ಚೀಟಿಗಳನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ.

ಚಾಸಾ -1 ರವರೊಂದಿಗೆ ನಾನು ಚಿಕಿತ್ಸೆಗಾಗಿ ಪ್ರತಿ ಬಾರಿಯೂ ಹೋಗಿರುತ್ತೇನೆ. ಆ ರೀತಿ ಔಷಧಿ ಚೀಟಿಗಳ ಮೇಲೆ ಬರೆದಿದ್ದ ದಿನಾಂಕಗಳಂದು ಆರೋಪಿಯ ಆಸ್ಪತ್ರೆಗೆ ಹೋಗಿರುತ್ತೇವೆ. ಆ ರೀತಿ 1 ಸಿಟ್ಟಿಂಗ್ ನಂತರ ಇನ್ನೊಂದು ಸಿಟ್ಟಿಂಗ್ ಗೆ 3 ದಿನಗಳ ಅಂತರದಲ್ಲಿ ದಿನಾಂಕಗಳನ್ನು ನೀಡಿದ್ದರು. ಸದರಿ 4 ಸಿಟ್ಟಿಂಗ್ ಗಳಲ್ಲಿ ರೂಟ್ ಕೆನಾಲ್ ಚಿಕಿತ್ಸೆಯನ್ನು ಮುಗಿಸುತ್ತೇನೆ ಎಂದು ಆರೋಪಿ ತಿಳಿಸಿದ್ದರು ಅಂದರೆ ಸರಿ. ಚಾಸಾ -1 ರವರ ಹಲ್ಲಿಗೆ ಹುಳು ತಿದ್ದಿದ್ದರಿಂದ ಆ ರೀತಿ ಚಿಕಿತ್ಸೆ ಕೊಡುವುದಾಗಿ ತಿಳಿಸಿದ್ದಿರಬಹುದು.

4 ಸಿಟ್ಟಿಂಗ್ ಗಳ ನಂತರವೇ ಎಸ್ ಡಿ ಎಂ ಆಸ್ಪತ್ರೆಗೆ ಹೋಗಿರುತ್ತೇವೆ ಅಂದರೆ ಸರಿಯಲ್ಲ. ದಿಃ 10-05-2016 ರಂದು ಹೋಗಿರುತ್ತೇವೆ ಎಂದು ನುಡಿಯುತ್ತಾರೆ. 4 ಸಿಟ್ಟಿಂಗ್ ಗಳ ನಂತರ ಮತ್ತು ದಿಃ 10-05-2016 ರ ಮದ್ಯದಲ್ಲಿ ಚಾಸಾ -1 ರವರು ಬೇರೆ ಯಾರ ಹತ್ತಿರವೂ ಚಿಕಿತ್ಸೆ ಪಡೆದಿರುವುದಿಲ್ಲ. ಚಾಸಾ -1 ರವರ ಹಲ್ಲಿನಲ್ಲಿ ಇದ್ದವು ಎನ್ನಲಾದ ಉಪಕರಣಗಳ ತುಂಡುಗಳು ಈಗಲೂ ಸಹ ಹಲ್ಲಿನಲ್ಲಿಯೇ ಇರುತ್ತವೆ. ವೈದ್ಯರು ಆ ದಿನ ಮಾಡಿದ್ದರು ಎನ್ನಲಾದ ಎಕ್ಸ ರೇ ಯನ್ನು ನಮಗೆ ಕೊಟ್ಟಿರುವುದಿಲ್ಲ. ನಾನು ಎಕ್ಸ ರೇ ದಾಖಲೆಯನ್ನು ನಂತರದಲ್ಲಿ ಪಡೆದು ಪೋಲಿಸರಿಗೆ ಅಥವಾ ನ್ಯಾಯಾಲಯಕ್ಕೆ ನೀಡಿರುವುದಿಲ್ಲ.

**ಸಿ ಡಬ್ಲ್ಯೂ - 4**
**ಪಿ ಡಬ್ಲ್ಯೂ - 2**

ಈ ಪ್ರಕರಣವನ್ನು ದಾಖಲಿಸಿದ ನಂತರ ಗ್ರಾಹಕರ ವೇದಿಕೆಗೆ ಚಾಸಾ -1 ರವರು ಅರ್ಜಿ ನೀಡಿದ್ದರು. ನಾನು ವೈದ್ಯರ ಶಿಸ್ತು ಪ್ರಾಧಿಕಾರಕ್ಕೆ ಆರೋಪಿಯ ವಿರುದ್ಧ ದೂರನ್ನು ನೀಡಿರುವುದಿಲ್ಲ. ಸಾಕ್ಷಿ ಮುಂದುವರೆದು ವೈದ್ಯರೆಲ್ಲರೂ ಹೆಚ್ಚಿನ ಚಿಕಿತ್ಸೆಯನ್ನು ಕೊಡಿಸುವುದಾಗಿ ಮಾತು ಕೊಟ್ಟಿದ್ದರಿಂದ ದೂರು ನೀಡಿಲ್ಲ ಎಂದು ನುಡಿಯುತ್ತಾರೆ.  ಪೋಲಿಸರು ಚಾಸಾ -1 ರವರು ದೂರು ನೀಡಿದ್ದರಿಂದ ನನ್ನ ಹೇಳಿಕೆಯನ್ನು ನೀಡುವಂತೆ ನನಗೆ ಕರೆದಿದ್ದರು. ಚಾಸಾ -1 ರವರು 2 ಬಾರಿ ದೂರನ್ನು ನೀಡಿದ್ದರು. ಒಂದು ದೂರು ಠಾಣೆಯಲ್ಲಿ, ಇನ್ನೊಂದು ಡಿ ವಾಯ್ ಎಸ್ ಪಿ ರವರಿಗೆ ನೀಡಿದ್ದರು. ಪಟ್ಟಣ ಪೋಲಿಸ ಠಾಣೆಯಲ್ಲಿ ಯಾವ ದಿನದಂದು ದೂರು ನೀಡಿರುತ್ತಾರೆ ಎಂದು ನನಗೆ ನೆನಪಿಲ್ಲ. ಪೋಲಿಸರು ದೂರನ್ನು ಪಡೆದು ಡಿ ಪಿ ಪ್ರಕರಣ ಎಂದು ದಾಖಲಿಸಿಕೊಂಡಿದ್ದರು ಎಫ್ ಆಯ್ ಆರ್  ಮಾಡಿರಲಿಲ್ಲ. ಪೋಲಿಸರು ಆರೋಪಿ ವೈದ್ಯರಾಗಿರುವುದರಿಂದ ಅವರನ್ನು ವಿಚಾರಿಸುವುದಾಗಿ ಹೇಳಿ ಡಿ ಪಿ ಪ್ರಕರಣ ದಾಖಲಿಸಿಕೊಂಡಿರುತ್ತಾರೆ. ಸದರಿ ಪ್ರಕರಣ ದಾಖಲು ಮಾಡಿಕೊಂಡು ಪೋಲಿಸರು ಆರೋಪಿಯನ್ನು ಠಾಣೆಗೆ ಕರೆಸಿದ್ದರು ಅಂದರೆ ಸರಿ. ಆಗ ಪೋಲಿಸರು ಆರೋಪಿಯ ಹೇಳಿಕೆಯನ್ನು ಪಡೆದಿರುತ್ತಾರೆ ಅಂದರೆ ಸರಿ.

ಈಗ ನಾನು ನೋಡುತ್ತಿರುವ ಹೇಳಿಕೆ ಅದೇ ಆಗಿರುತ್ತದೆ ಅಂದರೆ ಸರಿ. ಸಾಕ್ಷಿ ಆರೋಪಿ ನೀಡಿರುತ್ತಾರೆ ಎನ್ನಲಾದ ಹೇಳಿಕೆಯನ್ನು ಪ್ರಕರಣದ ದಾಖಲೆಯಲ್ಲಿ ನೋಡಿ ಗುರುತಿಸಿದ್ದು, ಅದನ್ನು ನಿಪಿಃ 6 ಎಂದು ಗುರುತಿಸಲಾಯಿತು.

ಧಾರಾಡಕ್ಕೆ ನಾನು ಚಾಸಾ -1 ರವರೊಂದಿಗೆ ಹೋಗಿದ್ದೆ. ಧಾರವಾಡದ ಆಸ್ಪತ್ರೆಯಲ್ಲಿ ಚಾಸಾ -1 ರವರ ಹಲ್ಲನ್ನು ಪರೀಕ್ಷಿಸಿ ವೈದ್ಯರು ಎಂ ಎಲ್ ಸಿ ಪ್ರಕರಣ ದಾಖಲಿಸಲಿಲ್ಲ. ನಾನು ವಕೀಲನಾಗಿರುವುದರಿಂದ ಪೋಲಿಸರು ಪ್ರಕರಣ ದಾಖಲಿಸಿದ ನಂತರ ನ್ಯಾಯಾಲಯಕ್ಕೆ ಬಂದು ಖಾಸಗಿ ಪಿರ್ಯಾದಿಯನ್ನು ದಾಖ್ಲಲಿಸಲು ತೊಂದರೆ ಇರಲಿಲ್ಲ ಅಂದರೆ ಸರಿ. ಸಾಕ್ಷಿ ಮುಂದುವರೆದು ಆರೋಪಿ ಪರಿಹಾರ ನೀಡುವುದಾಗಿ ತಿಳಿಸಿದ್ದರಿಂದ ದೂರು ದಾಖಲಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಪರಿಹಾರ ಕೊಡದಿದ್ದಾಗ ನ್ಯಾಯಾಲಯದಲ್ಲಿ ದೂರು ಸಲ್ಲಿಸಿಲ್ಲ. ಗ್ರಾಹಕಜರ ವೇದಿಕೆಗೆ ಅರ್ಜಿ ನೀಡಿರುತ್ತೇವೆ. ಪೋಲಿಸರು ನಾವು ಕೊಟ್ಟಿದ್ದ ದೂರು ಸುಳ್ಳಿನಿಂದ ಕೂಡಿರುತ್ತದೆ ಎಂದು ಗೊತ್ತಾದ ನಂತರ ಮತ್ತು ಅಮಾಯಕನಿಗೆ ತೊಂದರೆಯಾಗುತತದೆ ಎಂಬ ಕಾರಣಕ್ಕೆ ನಮ್ಮನ್ನು ಕರೆದು ಸದರಿ ವಿಚಾರ ತಿಳಿಸಿ ಪ್ರಕರಣ ದಾಖಲಿಸಲಿಲ್ಲ ಅಂದರೆ ಸರಿಯಲ್ಲ. ನಂತರದಲ್ಲಿ ನಾನು ಮತ್ತು ಚಾಸಾ -1 ರವರು ನಮ್ಮ ಅಧಿಕಾರದ ದುರುಪಯೋಗಪಡಿಸಿಕೊಂಡು ಡಿ ವಾಯ್ ಎಸ್ ಪಿ ರವರಿಗೆ ದೂರನ್ನು ನೀಡಿರುತ್ತೇವೆ ಅಂದರೆ ಸರಿಯಲ್ಲ. ಡಿ ವಾಯ್ ಎಸ್ ಪಿ ರವರಿಗೆ ಚಾಸಾ -1 ರವರು ದೂರನ್ನು ನೀಡಿರುತ್ತಾರೆ.

ಎಸ್ ಡಿ ಎಂ ಆಸ್ಪತ್ರೆಯಲ್ಲಿ ಚಾಸಾ -1 ರವರು ದಿಃ 10-05-2016 ರಿಂದ 01-07-2016 ರವರೆಗೆ ಚಿಕಿತ್ಸೆ ಪಡೆದಿರುತ್ತಾರೆ. ಸದರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ದೃಡೀಕೃತ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ಆಸ್ಪತ್ರೆಯ ವರದಿಯಲ್ಲಿ ರೂಟ್ ಕೆನಾಲ್ ಚಿಕಿತ್ಸೆ ಅಪೂರ್ಣವಾಗಿದೆ ಎಂದು ವೈದ್ಯರು ಬರೆದಿರುತ್ತಾರೆ ಅಂದರೆ ಸರಿಯಲ್ಲ. ಆರೋಪಿ ಚಾಸಾ -1 ರವರ ಹಲ್ಲಿನಲ್ಲಿ ಸೂಜಿ ಮುರಿಯುವ ಹಾಗೇ ಅಥವಾ ಇನ್ನಾವುದೇ ರೀತಿಯಲ್ಲಿ ನಿರ್ಲಕ್ಷತೆ ತೋರಿಸಿ ಚಿಕಿತ್ಸೆ ನೀಡಿಲ್ಲ ಅಂದರೆ ಸರಿಯಲ್ಲ.

**CC 153/2017**

**ಸಿ ಡಬ್ಲ್ಯೂ - 4**
**ಪಿ ಡಬ್ಲ್ಯೂ - 2**

ಈಗ ನಾನು ನೋಡುತ್ತಿರುವ ವರದಿಯನ್ನು ಎಸ್ ಡಿ ಎಂ, ಧಾರವಾಡ ಆಸ್ಪತ್ರೆಯವರು ನೀಡಿರುತ್ತಾರೆ ಅಂದರೆ ಸರಿ. ಸಾಕ್ಷಿ ಪ್ರಕರಣದಲ್ಲಿನ ವರದಿಯೊಂದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿಃ 7 ಎಂದು ಗುರುತಿಸಲಾಯಿತು. ಸದರಿ ವರದಿಯಲ್ಲಿ The root canal treatment was completed with 47 and 37 teeth followed by oral prophylaxis in the department of conservative Dentistry and endodontics ಎಂದು ನಮೂದಾಗಿದೆ ಅಂದರೆ ಸರಿ. ಆರೋಪಿ ಯಾವುದೇ ರೀತಿಯಲ್ಲಿ ಸೂಜಿ ಅಥವಾ ಉಪಕರಣದ ತುಂಡನ್ನು ಬಿಟ್ಟಿರದ ಕಾರಣ ಆ ರೀತಿ ವರದಿಯಲ್ಲಿ ಚಿಕಿತ್ಸೆ ಪೂರ್ಣವಾಗಿದೆ ಎಂದು ಬೆರಯಲಾಗಿದೆ ಅಂದರೆ ಸರಿಯಲ್ಲ.

ಆರೋಪಿ ಹೊಸಪೇಟೆಯಲ್ಲಿ ಮಾನ ಮರ್ಯಾದೆಯಿಂದ ತಮ್ಮ ವೃತ್ತಿಯನ್ನು ಮಾಡುತ್ತಿದ್ದಾಗ ಈ ಪ್ರಕರಣ ಮತ್ತು ಗ್ರಾಹಕರ ವೇದಿಕೆಯ ಪ್ರಕರಣವನ್ನು ದಾಖಲಿಸಿ ಅವರ ಮರ್ಯಾದೆ ತೆಗೆದಿರುತ್ತೇವೆ ಅಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಈ ರೀತಿಯ ಪ್ರಕರಣಗಳು ಆಗಿರದಿದ್ದ ಕಾರಣ ಈಗ ಈ ಪ್ರಕರಣ ದಾಖಲಾಗಿರುವುದರಿಂದ ಅವರಿಗೆ ಸಮಾಜದಲ್ಲಿ ತಲೆ ಎತ್ತಿ ಓಡಾಡಲು ಆಗುತ್ತಿಲ್ಲ ಅಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಬಂದು ಖಾಸಗಿ ಫಿರ್ಯಾದಿ ಸಲ್ಲಿಸಿದರೆ ನ್ಯಾಯಾಲಯ ಪರಿಶೀಲಿಸಿ ಅದನ್ನು ಪುರಸ್ಕರಿಸುವುದಿಲ್ಲ ಎಂದು ಗೊತ್ತಿದ್ದರಿಂದ ನಮ್ಮ ಪ್ರಭಾವ ಬೀರಿ ಡಿ ವಾಯ್ ಎಸ್ ಪಿ ಕಡೆಯಿಂದ ದೂರನ್ನು ಕಳುಹಿಸಿ ಠಾಣೆಯಲ್ಲಿ ಪ್ರಕರಣ ದಾಖಲಿಸುವಂತೆ ಮಾಡಿರುತ್ತೇನೆ ಅಂದರೆ ಸರಿಯಲ್ಲ. ಆರೋಪಿ ರೂಟ್ ಕೆನಾಲ್ ಚಿಕಿತ್ಸೆ ಮಾಡಲು ಬೇಕಾದ ವಿದ್ಯಾರ್ಹತೆ ಹೋದಿರುತ್ತಾರೆ ಅಂದರೆ ಸರಿಯಲ್ಲ.

ಆರೋಪಿಯ ಯಾವುದೇ ತಪ್ಪು ಇಲ್ಲದಿದ್ದರೂ ಸಹ ವಿನಾಕಾರಣ ಈ ಪ್ರಕರಣವನ್ನುದಾಖಲಿಸಿರುತ್ತೇವೆ ಅಂದರೆ ಸರಿಯಲ್ಲ. ಆರೋಪಿ ತನ್ನ ತಪ್ಪು ಇಲ್ಲದಿದ್ದರೂ ಸಹ ಗ್ರಾಹಕರ ವೇದಿಕೆಯಲ್ಲಿ ಪರಿಹಾರದ ಹಣವನ್ನು ಭರ್ತಿ ಮಾಡಿರುತ್ತಾರೆ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆದೇಶ ಆಗಿದ್ದರಿಂದ ಭರ್ತಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿ ಗ್ರಾಹಕರ ವೇದಿಕೆ ಆದೇಶ ಮಾಡಿದಂತೆ ಪರಿಹಾರ ಕೊಡಲು ಇಚ್ಚಿಸಿದ್ದರಿಂದ ಸದರಿ ಪ್ರಕರಣದಲ್ಲಿ ಕಂಟೆಸ್ಟ ಮಾಡಿರಲಿಲ್ಲ ಅಂದರೆ ಸರಿಯಲ್ಲ. ಚಾಸಾ -1 ರವರು ನನ್ನ ಹೆಂಡತಿ ಆಗಿರುವುದರಿಂದ ನನಗೆ ಮನಸಾಕ್ಷಿ ಒಪ್ಪದಿದ್ದರೂ ಈ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.